ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಯಾವುದೇ ಇದನ್ನು ಪುನರ್‌ಪರಿಶೀಲನೆ ಮಾಡಿ ಬಡ ನೇಕಾರರಿಗೆ ಸಹಾಯ ಮಾಡಬೇಕೆಂದು ಹೇಳಿದ್ದಾರೆ, ನಾನು ಅದನ್ನು ಪುನರ್ ಪರಿಶೀಲನೆ ಮಾಡಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಸನ್ಮಾನ್ಯ ಸಚಿವರಾದ ಸುಪ್ರಾವಸಂತ್ ರವರಿಗೆ ಸಂಬಂಧಪಟ್ಟದ್ದು. ಆದರೆ ಮಾನ್ಯ ಯಾಹ್ಯಾರವರು ಉತ್ತರವನ್ನು ಕೊಡುತ್ತಿದ್ದಾರೆ.

SRI S. M. YAHYA.—I don't thenk it is a technical point.

ಮೈಸೂರು ಜಿಲ್ಲೆಯಲ್ಲಿ ಕೈಗಾರಿಕೆಗಳ ಬಗ್ಗೆ.

೧೫೨೧. ಶ್ರೀ ಹರ್ಷಕುಮಾರ್‌ಗೌಡ (ಚಾಮರಾಜ).—ಮಾನ್ಯ ಕೈಗಾರಿಕೆ, ಇಂಧನ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಮೈಸೂರು ನಗರದ ಸುತ್ತಮುತ್ತಲಿರುವ ದೊಡ್ಡ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳೆಷ್ಟು ?

ಆ) ಮೈಸೂರು ಜಿಲ್ಲೆಯಲ್ಲಿ ನೂತನ ಉದ್ದಿಮೆಗಳ ಪ್ರಾರಂಭಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಇ) ಇದರಿಂದ ಎಷ್ಟು ಜನರಿಗೆ ಉದ್ಯೋಗಾವಕಾಶ ದೊರೆತಿದೆ

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕಾ ಮಂತ್ರಿಗಳು).—

ಅ) ದೊಡ್ಡ ಪ್ರಮಾಣದ ಕೈಗಾರಿಕೆಗಳು ... ೬೫
ಸಣ್ಣ ಪ್ರಮಾಣದ ಕೈಗಾರಿಕೆಗಳು ... ೯೯೧

ಆ) ಕೈಗಾರಿಕೆಗಳ ಅಭಿವೃದ್ಧಿಗಾಗಿ, ರಾಜ್ಯ ಸರ್ಕಾರವು ರಾಜ್ಯದಲ್ಲಿರುವ ತಾಲ್ಲೂಕ್‌ಗಳನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಿದ್ದು, ಮೈಸೂರು ಜಿಲ್ಲೆಯ ಕೊಳ್ಳೇಗಾಲ, ಕೃಷ್ಣರಾಜನಗರ, ಮತ್ತು ಹುಣಸೂರು ತಾಲ್ಲೂಕುಗಳನ್ನು ೨ನೇ ವಿಭಾಗದಲ್ಲಿ ಬರುವಂತೆಯೂ ಮತ್ತು ಗುಂಡ್ಲುಪೇಟೆ, ಪಿರಿಯಾಪಟ್ಟಣ, ಹೆಗ್ಗಡದೇವನಕೋಟೆ, ಟಿ. ನರಸೀಪುರ, ಯಳಂದೂರು ಮತ್ತು ಚಾಮರಾಜನಗರ ತಾಲ್ಲೂಕುಗಳನ್ನು ೩ನೇ ವಿಭಾಗದಲ್ಲಿ ತರಲಾಗಿದೆ.

೨ ಮತ್ತು ೩ನೇ ವಿಭಾಗದಲ್ಲಿ ಬರುವ ಕೈಗಾರಿಕೆಗಳಿಗೆ ಸ್ಥಿರ ಆಸ್ತಿಯ ಮೇಲೆ ಶೇಕಡಾ ೧೫ ರಿಂದ ೨೦ ಭಾಗದಷ್ಟು ಸಹಾಯಧನ, ಮೂಲಧನ ತೆರಿಗೆ ವಿನಾಯಿತಿ, ಸ್ಟ್ಯಾಂಪು ಶುಲ್ಕ ವಿನಾಯಿತಿಗಳನ್ನು ಮಂಜೂರು ಮಾಡಲಾಗುವುದು. ಹಾಗೂ ಈ ವಿಭಾಗದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವವರು, ಪರಿಶಿಷ್ಟಜಾತಿ ಮತ್ತು ಪಂಗಡ, ಮಹಿಳೆಯರು ಅಥವಾ ಅಂಗವಿಕಲರಾಗಿದ್ದರೆ ಅಂತಹವರಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗುವುದು.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತವು ನಂಜನಗೂಡು, ಯಾದವಗಿರಿ, ಮತ್ತು ಹೆಬ್ಬಾಳ ಕೈಗಾರಿಕಾ ವಸಾಹತು ಪ್ರದೇಶಗಳಲ್ಲಿ ಶೆಡ್ಡುಗಳನ್ನು ನಿರ್ಮಿಸಲು ಯೋಜನೆ ಹಮ್ಮಿಕೊಂಡಿದೆ. ಮತ್ತು ಹೆಗ್ಗಡದೇವನಕೋಟೆ ಕೃಷ್ಣರಾಜನಗರ ಗುಂಡ್ಲುಪೇಟೆ, ಟಿ. ನರಸೀಪುರ, ಯಳಂದೂರು, ಮತ್ತು ಚಾಮರಾಜನಗರಗಳಲ್ಲಿ ಶೆಡ್ಡುಗಳ ನಿರ್ಮಾಣಕ್ಕಾಗಿ ಭೂಮಿಯನ್ನು ಗುರುತಿಸಲಾಗುತ್ತಿದೆ.

೩೫೦ ಎಕರೆ ಜಮೀನನ್ನು ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಎಲೆಕ್ಟ್ರಾನಿಕ್ ಸೀಟ್‌ಗಾಗಿ ಮೈಸೂರಿನಲ್ಲಿ ಕಾಯ್ದಿರಿಸಲಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಸುಮಾರು ೩೨೦೦ ಎಕರೆಗಳಷ್ಟು ಜಮೀನನ್ನು ಜಿಲ್ಲೆಯಲ್ಲಿ ಸ್ವಾಧೀನಪಡಿಸಿಕೊಂಡಿದ್ದು ಅವುಗಳನ್ನು ಅಭಿವೃದ್ಧಿ ಪಡಿಸಿ ಕೈಗಾರಿಕೊದ್ಯಮಿಗಳಿಗೆ ಹಂಚಲಾಗುತ್ತಿದೆ.

ಇ) ಸುಮಾರು ೬೭,೦೦೦ ಮಂದಿಗೆ ಉದ್ಯೋಗ ಅವಕಾಶ ದೊರಕಿದೆ.

ಶ್ರೀ ಹರ್ಷಕುಮಾರ್‌ಗೌಡ.—ಸನ್ಮಾನ್ಯ ಅಧ್ಯಕ್ಷರೇ ಈಗ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಕೊನೆಯ ಪ್ರಶ್ನೆ ಇ. ಯಲ್ಲಿ ಇದರಿಂದ ಎಷ್ಟು ಜನರಿಗೆ ಉದ್ಯೋಗಾವಕಾಶ

ದೊರೆತಿದೆ ಎಂದು ಕೇಳಿರುವುದಕ್ಕೆ ಈ ಉದ್ಯೋಗದ ಪಟ್ಟಿಯಲ್ಲಿ ಇದರಿಂದ ಇಷ್ಟು ಜನರಿಗೆ ಉದ್ಯೋಗವಕಾಶ ದೊರೆತಿದೆ. ಎಂದು ಉತ್ತರದಲ್ಲಿ ಹೇಳಿದ್ದಾರೆ. ಉದ್ಯಮಗಳು ಪ್ರಾರಂಭದಿಂದ ಮುಂದೆ ಎಷ್ಟು ಜನ ಯುವಕರಿಗೆ ಉದ್ಯೋಗಾವಕಾಶ ದೊರಕುತ್ತದೆ ಎನ್ನುವುದು ಪ್ರಶ್ನೆ. ಜೊತೆಗೆ ಈಗಾಗಲೇ ಹೇಳಿದ್ದಾರೆ ಮೈಸೂರು ನಗರದ ಸುತ್ತಮುತ್ತಲೂ ದೊಡ್ಡ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳು ಎಷ್ಟು ಎಂದು ಕೇಳಿದ್ದಕ್ಕೆ ೩,೨೦೦ ಎಕರೆ ಪ್ರದೇಶವನ್ನು ನಾವು ವಶಪಡಿಸಿಕೊಂಡಿದ್ದು ಇದರಲ್ಲಿ ಕೈಗಾರಿಕಾ ಪ್ರದೇಶಗಳನ್ನಾಗಿ ವಿಸ್ತೀರ್ಣ ಮಾಡುತ್ತಿದ್ದೇವೆಂದು ಹೇಳಿದ್ದಾರೆ.

ಕನಿಷ್ಟ ೩,೨೦೦ ಎಕರೆ ಪ್ರದೇಶವನ್ನು ಕೈಗಾರಿಕಾ ಪ್ರದೇಶವನ್ನಾಗಿ ಮಾಡಿದಾಗ ೬–೭ ಸಾವಿರ ಜನ ನಿರುದ್ಯೋಗಿಗಳಾಗುತ್ತಾರೆ. ಆ ಪ್ರದೇಶದ ರೈತರು ಮತ್ತು ಅವರ ಮಕ್ಕಳು ಉದ್ಯೋಗಾವಕಾಶದಿಂದ ವಂಚಿತರಾಗುತ್ತಾರೆ. ೬–೭ ಸಾವಿರ ಜನ ಉದ್ಯೋಗಾವಕಾಶದಿಂದ ವಂಚಿತರಾಗಬೇಕಾದರೆ. ಅಲ್ಲಿ ಉದ್ದಿಮೆಗಳನ್ನು ಆರಂಭ ಮಾಡುವಾಗ ಆದ್ಯತೆಯ ಆಧಾರದ ಮೇಲೆ ಆ ಒಂದು ಕೈಗಾರಿಕಾ ಪ್ರದೇಶದಲ್ಲಿ ಜಮೀನು ಕೊಟ್ಟು ಕಳೆದುಕೊಂಡ ರೈತರ ಮಕ್ಕಳಲ್ಲಿ ಎಷ್ಟು ಜನರಿಗೆ ಉದ್ಯೋಗಾವಕಾಶ ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್ ಎಂ. ಯಾಹ್ಯಾ.—ಮಾನ್ಯ ಸದಸ್ಯರು ಬಹಳ ಹೈಪೊತೆಟಿಕಲ್ ಪ್ರಶ್ನೆ ಕೇಳಿದ್ದಾರೆ. ಇಂಡಸ್ಟ್ರಿ, ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್, ಇಂಡಸ್ಟ್ರಿಯಲೈಸೇಷನ್ ಎಂದು ಹೇಳಿದರೆ. ಕೈಗಾರಿಕೆಯನ್ನು ಸ್ಥಾಪನೆ ಮಾಡಿದಲ್ಲಿ ಉದ್ಯೋಗವನ್ನು ಒದಗಿಸಿಕೊಡುವುದು. ಪ್ರತಿಯೊಂದು ಕೈಗಾರಿಕೆಯನ್ನು ಸ್ಥಾಪನೆ ಮಾಡುವಾಗ ಇಷ್ಟಿಷ್ಟು ಜನರಿಗೆ ಉದ್ಯೋಗ ಕೊಡಬಹುದೆಂದು ಹೇಳಬೇಕಾದರೆ ಅದಕ್ಕೆ ಪ್ರಾಜೆಕ್ಟ್ ರಿಪೋರ್ಟ್‌ನ್ನು ಎಲ್ಲ ಬರಬೇಕಾಗುತ್ತದೆ. ಈಗ ಹೇಳುವುದು ಪ್ರೀಮೆಚ್ಯೂರ್ ಆಗುತ್ತದೆ ಮೈಸೂರಿನಲ್ಲಿ ಯಾವ ರೀತಿ ಕೈಗಾರಿಕೆ ಅಭಿವೃದ್ಧಿ ಆಗಿದೆ ಅದರ ಪ್ರಕಾರ ಹೇಳಬಹುದು. ೨೭ ಸಾವಿರ ಜನರಿಗೆ ಮೀಡಿಯಂ ಮತ್ತು ಲಾರ್ಜ್ ಸ್ಕೇಲ್ ಇಂಡಸ್ಟ್ರಿಗಳಲ್ಲಿ ಕೆಲಸ ಸಿಕ್ಕಿದೆ. ೪೦ ಸಾವಿರ ಜನರಿಗೆ ಸಾಲ್ಸ್ ಸ್ಕೇಲ್ ಇಂಡಸ್ಟ್ರಿಯಲ್ಲಿ ಕೆಲಸ ಸಿಕ್ಕಿದೆ. ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಸ್ಮಾಲ್ ಸ್ಕೇಲ್ ಪರಿಹಾರುವಂಥ ವ್ಯವಸ್ಥೆ ಈವರೆಗೆ ಆಗಿದೆ, ಮುಂದೆ ೩ ಸಾವಿರ ಎಕರೆ ತೆಗೆದುಕೊಳ್ಳುವುದಾಗಲಿ ಅಥವಾ ೩೫೦ ಎಕರೆಯಲ್ಲಿ ಹೊಸ ಎಲೆಕ್ಟ್ರಾನಿಕ್ ಸಿಟಿ ಮಾಡುವುದೂ ಇದೆ. ಆಲ್ಲೂ ಸಹ ಸಾವಿರಾರು ಜನರಿಗೆ ಉದ್ಯೋಗ ಸಿಗುವುದಕ್ಕೆ ಸಾಧ್ಯವಾಗುತ್ತದೆ. ಲ್ಯಾಂಡ್ ಅಕ್ವಿಜಿಷನ್‌ನಿಂದ ಕೆಲವರಿಗೆ ತೊಂದರೆಯಾಗುತ್ತದೆ. ಅದು ಸ್ವಾಭಾವಿಕ ಯಾರು ಭೂಮಿ ಕೊಡುತ್ತಾರೋ ಅವರಿಗೆ ಕಾನೂನು ಪ್ರಕಾರ ಪರಿಹಾರ ಕೊಡುತ್ತೇವೆ. ಆದಕ್ಕೂ ನಿರುದ್ಯೋಗಕ್ಕೂ ನೇರವಾದ ಸಂಬಂಧ ಇಲ್ಲ. ಅಂಥವರಿಗೂ ಹೆಚ್ಚು ಸಹಾಯ ಮಾಡಬೇಕಾದರೆ ಆ ದಿಸೆಯಲ್ಲಿ ನಾವು ಪ್ರಯತ್ನಿಸುತ್ತೇವೆ.

ಶ್ರೀ ಹರ್ಷಕುಮಾರ ಗೌಡ.—ಇಲ್ಲಿ ಉದ್ಯೋಗಾವಕಾಶ ಸೃಷ್ಟಿ ಮಾಡುವುದರ ಜೊತೆಗೆ ಗ್ರಾಮಾಂತರ ಪ್ರದೇಶದ ರೈತರ ಮಕ್ಕಳು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ಅವರೆಲ್ಲರಿಗೂ ಸರ್ಕಾರದಲ್ಲಿ ಕೆಲಸ ಕೊಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅವರೆಲ್ಲರಿಗೆ ಕೈಗಾರಿಕೆಗಳ ಮೂಲಕ ಉದ್ಯೋಗವನ್ನು ಕೊಡುವ ವ್ಯವಸ್ಥೆ ಆಗಬೇಕು. ನೂರಾರು ಎಕರೆ ಪ್ರದೇಶವನ್ನು ಎಲೆಕ್ಟ್ರಾನಿಕ್ ಪ್ರದೇಶ ಎಂದು ಮಾಡುತ್ತಿದ್ದೀರಿ. ಹಾಗೆ ಮಾಡಿದಾಗ ಗ್ರಾಮಾಂತರ ಪ್ರದೇಶದ ಎಷ್ಟು ಜನರಿಗೆ ಅಲ್ಲಿ ಉದ್ಯೋಗ ಸಿಗುತ್ತದೆ? ಇವತ್ತಿನ ದಿವಸ ತಮಿಳ್ನಾಡಿನವರಿಗೆ, ಆಂಧ್ರಪ್ರದೇಶದವರಿಗೆ ಉದ್ಯೋಗ ಸಿಗುವ ವ್ಯವಸ್ಥೆ ಆಗುತ್ತಿದೆಯೇ ಹೊರತು ಇಲ್ಲಿನ ಮಣ್ಣಿನ ಮಕ್ಕಳಿಗೆ ಕೆಲಸ ಸಿಕ್ಕದೆ ಇರುವುದು ಸ್ವಾಭಾವಿಕವಾಗಿದೆ. ಈ ದುರಂತವನ್ನು ತಪ್ಪಿಸಬೇಕು. ಹೊಸ ಉದ್ಯಮಗಳನ್ನು ಪ್ರಾರಂಭ ಮಾಡಿರುವುದು ಜೊತೆಗೆ ಇವತ್ತಿನ ದಿವಸ ನಿಂತಿರುವ ಉದ್ದಿಮೆಗಳನ್ನು ಪುನರಾರಂಭ ಮಾಡಿದರೆ ಎಷ್ಟೋ ಜನರಿಗೆ ಅನುಕೂಲವಾಗುತ್ತದೆ. ಉದಾಹರಣೆಗೆ ಕೆ.ಆರ್. ಮಿಲ್ ಮುಚ್ಚಿರುವುದರಿಂದ ಅಲ್ಲಿನ ಕಾರ್ಮಿಕರು.....

ಅಧ್ಯಕ್ಷರು.—ಇದು ಪ್ರಶ್ನೋತ್ತರ ವೇಳೆ. ಚರ್ಚೆ ಮಾಡಬೇಕೆಂದರೆ ಅದಕ್ಕೆ ಬೇರೆ ವ್ಯವಸ್ಥೆ ಮಾಡೋಣ.

ಶ್ರೀ ಹರ್ಷಕುಮಾರ ಗೌಡ.—ಹೆಚ್ಚಿಗೆ ಮಾತನಾಡುವುದಕ್ಕೆ ಹೋದಾಗ ಬೆಲ್ ಹೊಡೆಯುತ್ತೀರಿ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆಯ ಮಹತ್ವವನ್ನು ತಾವು ಅರ್ಥಮಾಡಿಕೊಳ್ಳಬೇಕು.

ಶ್ರೀ ಹರ್ಷಕುಮಾರ ಗೌಡ.—ಮೈಸೂರು ನಗರದ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುತ್ತೀರಾ? ಮುಚ್ಚಿರುವ ಕೆ.ಆರ್. ಮಿಲ್ಲನ್ನು ತುರ್ತಾಗಿ ಯಾವಾಗ ಆರಂಭ ಮಾಡುತ್ತೀರಿ?

ಅಧ್ಯಕ್ಷರು,—ಹಾಗೆ ಕೇಳುವುದಂ ಬಿಟ್ಟು ವಿನಂತಿ ಮಾಡಿಕೊಳ್ಳುತ್ತೇನೆ, ಆರಿಕೆ ಮಾಡಿಕೊಳ್ಳುತ್ತೇನೆ ಅನ್ನುವುದಕ್ಕೆ ಇದೇನು ಪ್ರಜಾಪ್ರತಿನಿಧಿ ಸಭೆ ಕೆಟ್ಟು ಹೋಯಿತೆ?

ಶ್ರೀ ಎಸ್.ಎಂ. ಯಾಹ್ಯಾ.—ಇಂಥ ದೊಡ್ಡ ಇಂಡಸ್ಟ್ರೀಯಂನ್ನು ಪ್ರಾರಂಭ ಮಾಡುವಾಗ ಕೆಲವರಿಗೆ ತೊಂದರೆ ಆಗುತ್ತದೆ. ತೊಂದರೆ ಆಗುತ್ತದೆಂದು ಪಾಡಲೇ ಬಾರದೆಂದು ಹೇಳುವುದಕ್ಕಾಗುವುದಿಲ್ಲ. ಇಂಡಸ್ಟ್ರೀಸ್ ಬರಲೇಬೇಕಾಗುತ್ತದೆ, ಉದ್ಯೋಗವನ್ನು ಒದಗಿಸಲೇಬೇಕಾಗುತ್ತದೆ. ಅದಕ್ಕಾಗಿ ನಮ್ಮ ಸ್ಥಳೀಯ ಜನರಿಗೆ ಉದ್ಯೋಗ ಸಿಗಬೇಕು, ಕರ್ನಾಟಕದವರಿಗೆ ಉದ್ಯೋಗ ಸಿಗಬೇಕೆಂಬ ಉದ್ದೇಶವನ್ನಿಟ್ಟುಕೊಂಡು ೮೧ ಪರ್ಸೆಂಟ್ ಆದರೂ ಲೋಕಲ್ ಜನರಿಗೆ ಉದ್ಯೋಗ ಕೊಡಲೇ ಬೇಕೆಂದಿದ್ದೇವೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರಿ, ಎಲೆಕ್ಟ್ರಾನಿಕ್ ಇಂಡಸ್ಟ್ರಿ ಮಾಡಿದರೆ ನೇರವಾಗಿ ಯಾರೆಲ್ಲ ಓದಿದ್ದಾರೆ, ಇಂಜಿನಿಯರ್ಸ್ ಇದ್ದಾರೆ, ಟೆಕ್ನಿಕಲ್ ಸ್ಕಿಲ್ಡ್ ಇಟ್ಟುಕೊಂಡಿದ್ದಾರೆ ಅವರಿಗೆ ನೇರವಾಗಿ ಸಹಾಯವಾಗುವಂತಹ ಯೋಜನೆಗಳು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನಲ್ಲಿವೆ. ಅದರಿಂದ ಎಲ್ಲರಿಗೂ ಸಹಾಯವಾಗುತ್ತದೆ.

ಶ್ರೀ ಎಂ. ಪಂಹದೇವ್.—ಇವೆಲ್ಲ ಹಿಂದೆ ಸ್ಥಾಪನೆ ಮಾಡಿದಂತಹ ಕಾರ್ಖಾನೆಗಳಂ ಮುಂದೆ ಸ್ಥಾಪನೆ ಮಾಡತಕ್ಕ ಕಾರ್ಖಾನೆಗಳಲ್ಲಿ ನಾವು ಹೆಚ್ಚಾಗಿ ಸ್ಥಳೀಯರಿಗೆ ಉದ್ಯೋಗ ಕೊಡಬೇಕೆಂದು ಇದೆ. ಕಾರ್ಖಾನೆಗಳಲ್ಲಿ ಮುಖ್ಯವಾದ ಕೆಲಸಗಳನ್ನು ಮತ್ತು ಹಣ ಹೆಚ್ಚಿಗೆ ಬರತಕ್ಕ ಕೆಲಸಗಳನ್ನು ಹೊರಗಿನವರಿಗೆ ಕೊಟ್ಟು ಸ್ಥಳೀಯರಿಗೆ ಮಣ್ಣು ಹೊರುವುದು ಇಂಥ ಸಣ್ಣ ಕೆಲಸ ಕೊಟ್ಟು ಕಡಿಮೆ ಸಂಬಳ ಕೊಡುತ್ತಿರುವುದಂ ಸರ್ಕಾರದ ಗಮನಕ್ಕೆ ಬಂದಿದೆಯೇ? ಮತ್ತೆ ಕೆಲವು ಕಾರ್ಖಾನೆಗಳು ಸ್ಥಾಪನೆಯಾಗಿ ಸರ್ಕಾರದಿಂದ ಅನುದಾನವನ್ನು ತೆಗೆದುಕೊಂಡು ಒಂದು ವರ್ಷ ನಡೆಸಿ ೧೦೦ ಜನ ೨೦೦ ಜನರನ್ನು ತೆಗೆದುಕೊಂಡಂ ನಂತರ ಅವು ರೋಗಗ್ರಸ್ಥವಾಗಿ ನಷ್ಟವಾಗಿ ಮುಚ್ಚಿವೆ. ಅದರಿಂದ ನಿರುದ್ಯೋಗ ಸಮಸ್ಯೆ ಒರಂತಿದೆ. ಹಣ ಸರಿಯಾಗಿ ಉಪಯೋಗವಾಗುತ್ತಿಲ್ಲ. ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆಯೆ?

ಶ್ರೀ ಎಸ್. ಎಂ. ಯಾಹ್ಯಾ.—ಕಾರ್ಖಾನೆಗಳು ರೋಗಗ್ರಸ್ತವಾಗಂವುದಕ್ಕೆ ಹಲವಾರಂ ಕಾರಣಗಳಿವೆ. ಆ ವಿಚಾರದಲ್ಲಿ ನಾನು ಹೆಚ್ಚು ಹೇಳುವುದಕ್ಕೆ ಹೋಗಂವುದಿಲ್ಲ. ಆದರೆ ನಮ್ಮ ನೀತಿ ಇದು, ಹೆಚ್ಚು ಹೆಚ್ಚು ಕೈಗಾರಿಕೆಗಳಾಗಬೇಕು, ಇನ್‌ವೆಸ್ಟ್‌ಮೆಂಟ್ ಆಗಬೇಕು, ಹೆಚ್ಚು ಜನರಿಗೆ ಉದ್ಯೋಗ ಸಿಗುವಂತೆ ಮಾಡಬೇಕೆಂಬುದೇ that is the thrust of our policy also.

ದಕ್ಷಿಣ ಕನ್ನಡ ಜಿಲ್ಲೆಯಂ ರೇಷ್ಮೆ ಉತ್ಪಾದನೆ ಬಗ್ಗೆ

೧೫೫೨. ಶ್ರೀ ಜಿ.ಎಸ್, ಆಚಾರ್ (ಬೈಂದೂರು).— ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ರೈತರು ರೇಷ್ಮೆ ಕೃಷಿ ಮಾಡುತ್ತಿದ್ದಾರೆ.

ಆ) ೧೯೮೯-೯೦ನೇ ವರ್ಷದಲ್ಲಿ ಎಷ್ಟು ರೇಷ್ಮೆ ಉತ್ಪಾದಿಸಲಾಗಿದೆ, ಅದರ ಪೌಲ್ಯವೆಷ್ಟು?

ಇ) ರೇಷ್ಮೆ ಉತ್ಪಾದನೆಗೆ ೧೯೮೯-೯೦ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ (೧) ವಿಶೇಷಘಟಕ ಯೋಜನೆ (೨) ಗಿರಿಜನ ಅಭಿವೃದ್ಧಿ ಯೋಜನೆಯಲ್ಲಿ ಎಷ್ಟು ಹಣ ವ್ಯಯ ಮಾಡಲಾಯಿತು ಫಲಾನುಭವಿಗಳೆಷ್ಟು. ಅವರು ಉತ್ಪಾದಿಸಿದ ರೇಷ್ಮೆ ಎಷ್ಟು, ಅದರ ಪೌಲ್ಯವೆಷ್ಟು?